| ಕರ್ನಾಟಕ ವಿಧಾನ ಪರಿಷತ್ತು | | |
|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 61 (740) |
| 2 | ಮಾನ್ಯ ಸದಸ್ಯರ ಹೆಸರು | ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸ ಬೇಕಾದ ದಿನಾಂಕ | 18-08-2025 |
| 4 | ಉತ್ತರಿಸಬೇಕಾದ ಸಚಿವರು | ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹೃದ್ರೋಗ ಸಮಸ್ಯೆಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ ಹೃದ್ರೋಗ ಸಮಸ್ಯೆಯನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು: | • ರಾಜ್ಯದಲ್ಲಿ ಹೃದ್ರೋಗ ಸಮಸ್ಯೆಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯು ಹೃದ್ರೋಗ ಸಂಬಂಧಿ ಖಾಯಿಲೆಗಳಿಗೆ ಆದುನಿಕ ತಂತ್ರಜ್ಞಾನ ಬಳಕೆಯೊಂದಿಗೆ ವಿಶಿಷ್ಟವಾಗಿ ಗುಣಮಟ್ಟದ ಚಿಕಿತ್ಸೆಯನ್ನು ನೀಡುವ ಉದ್ದೇಶಕ್ಕಾಗಿಯೇ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಾಗಿರುತ್ತದೆ. ಸದರಿ ಸಂಸ್ಥೆಯ ಪರಿಣತ ವೈದ್ಯ ಸಮೂಹದ ಸಲಹೆಗಳು ಮತ್ತು ಅಧ್ಯಯನಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಸರ್ಕಾರವು ಹೃದ್ರೋಗ ಸಮಸ್ಯೆಯನ್ನು ನಿಯಂತ್ರಿಸಲು ಕ್ರಮವಹಿಸುತ್ತಿದೆ.<br>• ಹೆಚ್ಚುತ್ತಿರುವ ಹೃದ್ರೋಗ ಸಮಸ್ಯೆಗಳು ಪರಿಣಾಮಕಾರಿಯಾಗಿ ನಿಯಂತ್ರಿಸಲು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಡಿಯಲ್ಲಿ ಈ ಕೆಳಕಂಡ ಹೃದ್ರೋಗ ಉಪಘಟಕಗಳ ಶಾಖೆಗಳನ್ನು ತೆರೆಯಲಾಗಿದೆ.<br>1. ಎಸ್ ಜೆ ಐ ಸಿ ಆರ್, ಮೈಸೂರು ಶಾಖೆ<br>2. ಎಸ್ ಜೆ ಐ ಸಿ ಆರ್, ಕಲಬುರಗಿ ಶಾಖೆ<br>3. ಇ.ಎಸ್.ಐ.ಸಿ – ಎಂ.ಹೆಚ್. ಆಸ್ಪತ್ರೆ ಆವರಣ ರಾಜಾಜಿನಗರ, ಬೆಂಗಳೂರು.<br>4. ಎಸ್ ಜೆ ಐ ಸಿಆರ್, ಕೆ.ಸಿ.ಜಿ ಮಲ್ಲೇಶ್ವರಂ, ಬೆಂಗಳೂರು<br>5. ಹುಬ್ಬಳ್ಳಿ ಶಾಖೆ<br>6. ಗದಗ ಶಾಖೆ<br>7. ಬೀದರ್ ಶಾಖೆಯು ಕಾರ್ಯಾರಂಭಿಸುವ ಹಂತದಲ್ಲಿದೆ.<br>8. ಜಯದೇವ ಆಸ್ಪತ್ರೆ, ಬೆಂಗಳೂರು ಆವರಣದಲ್ಲಿ ಇನ್‌ಫೋಸಿಸ್ ಫೌಂಡೇಷನ್ ವತಿಯಿಂದ 300 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ<br>9. ಒಪೆಕ್, ರಾಯಚೂರು.<br>ಮುಂದುವರೆದು ರಾಜ್ಯ ಸರ್ಕಾರದಿಂದ ಆರೋಗ್ಯ ಸೇವೆಗಳಿಗಾಗಿ ಬಿಡುಗಡೆಯಾಗುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಿದ್ದು, ಎಲ್ಲಾ ರೀತಿಯ ಅತ್ಯಾಧುನಿಕ ಉಪಕರಣಗಳ ಸೌಲಭ್ಯಗಳನ್ನು ಒದಗಿಸಲಾಗಿದೆ ಹಾಗೂ ಸರ್ಕಾರದಿಂದ ಘೋಷಿಸಿರುವ ಯೋಜನೆಯಡಿಯಲ್ಲಿ ಬರುವ ರೋಗಿಗಳಿಗೆ ಯಾವುದೇ ತೊಂದರೆಯಾಗದ ರೀತಿಯಲ್ಲಿ ಬಡ ಜನರ ಪರ ಕಾಳಜಿ ವಹಿಸಿ ಸೇವೆಗಳನ್ನು ನೀಡಲಾಗುತ್ತಿದೆ ಹಾಗೂ ಒಳರೋಗಿಗಳ ವೇಳೆಯನ್ನು ವಿಸ್ತರಿಸಲಾಗಿದೆ.<br>ಅಲ್ಲದೆ- ರಾಜ್ಯದಲ್ಲಿ ಹೃದ್ರೋಗ ಸಮಸ್ಯೆಗಳು ಹೆಚ್ಚುತ್ತಿರುವ ಕುರಿತು ಪರಿಶೀಲಿಸಿ ವರದಿ ನೀಡಲು ಸರ್ಕಾರದಿಂದ ನೇಮಕವಾಗಿದ್ದ ಡಾ. ರವೀಂದ್ರನಾಥ್, ನಿರ್ದೇಶಕರು, ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯವರ ನೇತೃತ್ವದ ಸಮಿತಿಯು ವರದಿ ನೀಡಿರುತ್ತದೆ. ಅದರಂತೆ ಹೃದ್ರೋಗ ಸಮಸ್ಯೆಗಳಿಗೆ Pre-Existing Heart Diseases, ಮದ್ಯಪಾನ, ಧೂಮಪಾನ, ಮಧುಮೇಹ, ಅಧಿಕ ರಕ್ತದೊತ್ತಡ, ಬೊಜ್ಜುತನ, ವಂಶ ಪಾರಂಪರ್ಯವಾಗಿ ಕುಟುಂಬಗಳಲ್ಲಿ ಕಂಡು ಬರುವ ಹೃದ್ರೋಗ ಸಮಸ್ಯೆಗಳು-ಮುಖ್ಯ ಕಾರಣಗಳು ಎಂಬುದಾಗಿ ವರದಿ ನೀಡಿರುತ್ತದೆ.<br>ಹೃದ್ರೋಗ ಸಮಸ್ಯೆಯನ್ನು ನಿಯಂತ್ರಿಸಲು ವೈದ್ಯಕೀಯ ಶಿಕ್ಷಣ ಇಲಾಖೆ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯು ಜಂಟಿಯಾಗಿ ಎಲ್ಲಾ ಆಸ್ಪತ್ರೆಗಳಲ್ಲು ಚಿಕಿತ್ಸೆಯ ನೆರವು ಒದಗಿಸುವುದರೊಂದಿಗೆ ಸದರಿ ಸಮಸ್ಯೆಯನ್ನು ನಿಯಂತ್ರಿಸಲು ವಹಿಸಬೇಕಾದ ಮುನ್ನೆಚ್ಚರಿಕೆ ಕ್ರಮಗಳನ್ನು ಸಾರ್ವಜನಿಕ ತಿಳುವಳಿಕೆಗಾಗಿ ಸಮೂಹ ಮಾಧ್ಯಮಗಳ ಮುಖಾಂತರ ಕೈಗೊಳ್ಳಲಾಗಿರುತ್ತದೆ. |

<table>
<tr><td>ಆ)</td><td>ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ಮಂಜೂರಾಗಿರುವ ಒಟ್ಟು ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು: ಪ್ರಸ್ತುತ ಖಾಲಿ ಇರುವ ಹುದ್ದೆಗಳು ಎಷ್ಟು: (ವಿವರ ನೀಡುವುದು)</td><td>ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ಮಂಜೂರಾಗಿರುವ ವೈದ್ಯಾಧಿಕಾರಿಗಳ ಸಂಖ್ಯೆ ಒಟ್ಟು 270. ಪ್ರಸ್ತುತ ವೈದ್ಯಾಧಿಕಾರಿಗಳ ಹುದ್ದೆ ಖಾಲಿಯಿರುವುದಿಲ್ಲ.</td></tr>
<tr><td>ಇ)</td><td>ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಯನ್ನು ಭರ್ತಿಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು:</td><td>ಪ್ರಸ್ತುತ ಸಂಸ್ಥೆಯಲ್ಲಿ ವೈದ್ಯಾಧಿಕಾರಿಗಳ ಹುದ್ದೆ ಖಾಲಿಯಿರುವುದಿಲ್ಲ.</td></tr>
<tr><td>ಈ)</td><td>ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಪ್ರಸ್ತುತ ಒಟ್ಟು ಎಷ್ಟು ಭದ್ರತಾ ಮತ್ತು ಸ್ವಚ್ಛತಾ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ: (ಸಂಪೂರ್ಣ ವಿವರ ನೀಡುವುದು)</td><td>ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಭದ್ರತಾ ಮತ್ತು ಸ್ವಚ್ಛತಾ ಸಿಬ್ಬಂದಿ ಈ ಕೆಳಕಂಡಂತೆ ಕಾರ್ಯ ನಿರ್ವಹಿಸುತ್ತಿರುತ್ತಾರೆ.<br><br>ಭದ್ರತಾ ಸಿಬ್ಬಂದಿ ವಿವರಗಳು
<table>
<tr><th>ವಿವರ</th><th>ಎಸ್ ಜೆಐಸಿಆರ್, ಬೆಂಗಳೂರು</th><th>ಎಸ್ ಜೆಐಸಿಆರ್, ಕೆಸಿಜಿ ಘಟಕ, ಮಲ್ಲೇಶ್ವರಂ</th><th>ಎಸ್ ಜೆಐಸಿಆರ್, ಮೈಸೂರು ಶಾಖೆ</th><th>ಎಸ್ ಜೆಐಸಿಆರ್, ಕಲಬುರಗಿ ಶಾಖೆ</th></tr>
<tr><td>ಸೆಕ್ಯೂರಿಟಿ ಸೂಪರ್‌ವೈಸರ್</td><td>04</td><td>-</td><td>04</td><td>06</td></tr>
<tr><td>ಮಾಬ್ ಕಂಟ್ರೋಲ್ ಫೋರ್ಸ್</td><td>06</td><td>-</td><td>-</td><td>-</td></tr>
<tr><td>ಸೆಕ್ಯೂರಿಟಿ ಗಾರ್ಡ್ಸ್</td><td>146</td><td>11</td><td>83</td><td>95</td></tr>
<tr><td>ಒಟ್ಟು</td><td>156</td><td>11</td><td>87</td><td>101</td></tr>
</table>
<br><u>ಸ್ವಚ್ಛತಾ ಸಿಬ್ಬಂದಿ ವಿವರಗಳು</u>
<table>
<tr><th>ವಿವರ</th><th>ಎಸ್ ಜೆಐಸಿಆರ್, ಬೆಂಗಳೂರು</th><th>ಎಸ್‌ಜೆಐಸಿಆರ್, ಕೆಸಿಜಿ ಘಟಕ, ಮಲ್ಲೇಶ್ವರಂ</th><th>ಎಸ್ ಜೆಐಸಿಆರ್, ಮೈಸೂರು ಶಾಖೆ</th><th>ಎಸ್ ಜೆಐಸಿಆರ್, ಕಲಬುರಗಿ ಶಾಖೆ</th></tr>
<tr><td>ಹೌಸ್‌ಕೀಪಿಂಗ್ ಸೂಪರ್‌ವೈಸರ್</td><td>16</td><td>-</td><td>03</td><td>03</td></tr>
<tr><td>ಹೌಸ್‌ಕೀಪಿಂಗ್ ಮೇಡ್ಸ್</td><td>154</td><td>12</td><td>52</td><td>52</td></tr>
<tr><td>ಒಟ್ಟು</td><td>170</td><td>12</td><td>55</td><td>55</td></tr>
</table>
</td></tr>
<tr><td>ಉ)</td><td>ಈ ಸಂಸ್ಥೆಯಲ್ಲಿ ಯಾವ ಯಾವ ಏಜೆನ್ಸಿಗಳಿಂದ ಎಷ್ಟೆಷ್ಟು ಭದ್ರತಾ ಮತ್ತು ಸ್ವಚ್ಛತಾ ಸಿಬ್ಬಂದಿಗಳು</td><td><u>ಸ್ವಚ್ಛತಾ ಸೇವೆ:</u><br>01. ಮೆ. ಬಿಸಿನೆಸ್ ಆಸೋಸಿಯೇಟ್ಸ್ 3 ವರ್ಷಗಳ ಕಾಲ ಸ್ವಚ್ಛತಾ ಸೇವೆಯನ್ನು ಒದಗಿಸಿದ್ದರು.</td></tr>
</table>

<table>
<tr>
<td></td>
<td>ಕಾರ್ಯನಿರ್ವಹಿಸುತ್ತಿದ್ದಾರೆ ಹಾಗೂ ಸದರಿ ಏಜೆನ್ಸಿಯವರು ಎಷ್ಟು ವರ್ಷಗಳಿಂದ ಸೇವೆಯನ್ನು ನೀಡುತ್ತಾ ಬಂದಿರುತ್ತಾರೆ (ವಿವರ ನೀಡುವುದು)</td>
<td>02. ಮೆ. ಡಿಟೆಕ್ಟ್ ವೆಲ್ ಸೆಕ್ಯೂರಿಟಿ ಸರ್ವಿಸಸ್ ಪ್ರೈ. ಲಿಮಿಟೆಡ್ ಇವರು 15 ವರ್ಷಗಳಿಂದ ಸ್ವಚ್ಚತಾ ಸೇವೆಯನ್ನು ಒದಗಿಸುತ್ತಿರುತ್ತಾರೆ.<br><br><u>ಭದ್ರತಾ ಸೇವೆ:</u><br><br>01. ಜಡ್ ಡಿಟೆಕ್ಟಿವ್ ಏಜೆನ್ಸಿ 3 ವರ್ಷಗಳ ಕಾಲ ಭದ್ರತಾ ಸೇವೆಯನ್ನು ಒದಗಿಸಿದ್ದರು.<br>02. ಮೆ. ಡಿಟೆಕ್ಟ್ ವೆಲ್ ಸೆಕ್ಯೂರಿಟಿ ಸರ್ವಿಸಸ್ ಪ್ರೈ ಲಿಮಿಟೆಡ್ ಇವರು 15 ವರ್ಷಗಳಿಂದ ಭದ್ರತಾ ಸೇವೆಯನ್ನು ಒದಗಿಸುತ್ತಿರುತ್ತಾರೆ.</td>
</tr>
<tr>
<td>ಊ)</td>
<td>ಇತ್ತೀಚಿನ ದಿನಗಳಲ್ಲಿ ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಗೆ ಭದ್ರತಾ ಮತ್ತು ಸ್ವಚ್ಚತಾ ಸೇವೆಯನ್ನು ನೀಡಲು ಟೆಂಡರ್ ಕರೆಯಲಾಗಿದೆಯೇ: (ವಿವರ ನೀಡುವುದು)</td>
<td>• ದಿನಾಂಕ:25.06.2025 ರಂದು ಟೆಂಡರ್ ಅಧಿಸೂಚನೆ ಸಂಖ್ಯೆ: ಎಸ್ ಜೆಐಸಿಆರ್/2025-26/ಎಸ್ಇ0021 ರ ಅನ್ವಯ ಈ ಸಂಸ್ಥೆಯ ಬೆಂಗಳೂರು, ಕೆಸಿಜಿ ಆಸ್ಪತ್ರೆ ಘಟಕ, ಮಲ್ಲೇಶ್ವರಂ, ಹಾಗೂ ಮೈಸೂರು ಶಾಖೆಗೆ ಸ್ವಚ್ಚತಾ ಸಿಬ್ಬಂದಿ ಒದಗಿಸಲು ಟೆಂಡರ್ ಕರೆಯಲಾಗಿರುತ್ತದೆ.<br><br>• ದಿನಾಂಕ:25.06.2025ರಂದು ಟೆಂಡರ್ ಅಧಿಸೂಚನೆ ಸಂಖ್ಯೆ: ಎಸ್ ಜೆಐಸಿಆರ್/2025-26/ಎಸ್ಇ0022 ರ ಅನ್ವಯ ಈ ಸಂಸ್ಥೆಯ ಬೆಂಗಳೂರು, ಕೆಸಿಜಿ ಆಸ್ಪತ್ರೆ ಘಟಕ, ಮಲ್ಲೇಶ್ವರಂ, ಹಾಗೂ ಮೈಸೂರು ಶಾಖೆಗೆ ಭದ್ರತಾ ಸಿಬ್ಬಂದಿ ಒದಗಿಸಲು ಟೆಂಡರ್ ಕರೆಯಲಾಗಿರುತ್ತದೆ.</td>
</tr>
<tr>
<td>ಋ)</td>
<td>ಎಷ್ಟು ವರ್ಷಗಳಿಗೆ ಒಮ್ಮೆ ಟೆಂಡರ್ ಕರೆಯಲಾಗುವುದು ಹಾಗೂ ಟೆಂಡರ್‌ನಲ್ಲಿ ಏಜೆನ್ಸಿಯನ್ನು ಆಯ್ಕೆ ಮಾಡುವ ಮಾನದಂಡಗಳು ಯಾವುವು? (ಸಂಪೂರ್ಣ ಮಾಹಿತಿ ನೀಡುವುದು)</td>
<td>• 3 ವರ್ಷಗಳಿಗೆ ಒಮ್ಮೆ ಟೆಂಡರ್ ಕರೆಯಲಾಗುತ್ತಿದ್ದು, ಈ ಬಾರಿ 5 ವರ್ಷಗಳ ಅವಧಿಗೆ ಟೆಂಡರ್ ಕರೆಯಲಾಗಿರುತ್ತದೆ.<br><br>• ಗುಣಮಟ್ಟ ಮತ್ತು ವೆಚ್ಚ ಆಧಾರಿತ ಆಯ್ಕೆ (QCBS) (Quality and cost based selection) ವಿಧಾನದ ಅನ್ವಯ ಟೆಂಡರ್ ಕರೆಯಲಾಗಿರುತ್ತದೆ.<br><br><u>ಮಾನದಂಡಗಳು: ಸ್ವಚ್ಚತಾಸೇವೆ</u><br><br>• ಮೌಲ್ಯಮಾಪನ ಮಾನದಂಡ: ಬಿಡ್‌ದಾರರನ್ನು ತಾಂತ್ರಿಕ-ವಾಣಿಜ್ಯ (ಟೆಕ್ನೋ ಕಮರ್ಷಿಯಲ್) ಮೌಲ್ಯಮಾಪನದ ಆಧಾರದ ಮೇಲೆ ಆಯ್ಕೆಮಾಡಲಾಗುತ್ತದೆ. ತಾಂತ್ರಿಕ ಮಾನದಂಡಗಳಿಗೆ ಈ ಕೆಳಕಂಡಂತೆ 100 ಅಂಕಗಳನ್ನು ನಿಗದಿಪಡಿಸಲಾಗಿದೆ.
<table>
<tr><th>ಕ್ರ ಸಂ</th><th>ಮಾನದಂಡ</th><th>ಗರಿಷ್ಟ ಅಂಕಗಳು</th><th>ಷರಾ</th></tr>
<tr><td>1</td><td>ಕಾರ್ಯಾಚರಣೆಯಲ್ಲಿರುವ ವರ್ಷಗಳು</td><td>24 (ಪೂರ್ಣಗೊಂಡ ಪ್ರತಿ ವರ್ಷಕ್ಕೆ 2 ಅಂಕಗಳು)</td><td>ದಾಖಲೆ ಆಧಾರದ ಮೇಲೆ ಅಂಕಗಳನ್ನು ನೀಡಲಾಗುತ್ತದೆ</td></tr>
<tr><td>2</td><td>ಎಂ.ಸಿ.ಐ. / ಎನ್.ಎ.ಬಿ.ಎಚ್. ಮಾನ್ಯತೆ ಪಡೆದ ಸರ್ಕಾರದ ಆಸ್ಪತ್ರೆಯಲ್ಲಿ ಅನುಭವ.<br>100 ಹಾಸಿಗೆಗಳು-02 ಅಂಕಗಳು<br>200 ಹಾಸಿಗೆಗಳು-04 ಅಂಕಗಳು<br>300 ಹಾಸಿಗೆಗಳು-06 ಅಂಕಗಳು<br>400 ಹಾಸಿಗೆಗಳು-08 ಅಂಕಗಳು<br>500 ಹಾಸಿಗೆಗಳು-10 ಅಂಕಗಳು<br>750 ಹಾಸಿಗೆಗಳು-20 ಅಂಕಗಳು<br>1000 ಹಾಸಿಗೆಗಳು-30 ಅಂಕಗಳು</td><td>30 ಅಂಕಗಳು</td><td>ಮೇಲೆ ತಿಳಿಸಿದಂತೆ</td></tr>
<tr><td>3</td><td>ಕನಿಷ್ಟ 500 ಹಾಸಿಗೆಗಳ ಸಾಮರ್ಥ್ಯವಿರುವ ಹೃದ್ರೋಗ ಆಸ್ಪತ್ರೆಯಲ್ಲಿ ಅನುಭವ.</td><td>30 ಅಂಕಗಳು</td><td>ಮೇಲೆ ತಿಳಿಸಿದಂತೆ</td></tr>
</table>
</td>
</tr>
</table>

| | | | |
|---|---|---|---|
| | 100 ಹಾಸಿಗೆಗಳು-05 ಅಂಕಗಳು<br>200 ಹಾಸಿಗೆಗಳು-10 ಅಂಕಗಳು<br>300 ಹಾಸಿಗೆಗಳು-15 ಅಂಕಗಳು<br>400 ಹಾಸಿಗೆಗಳು-20 ಅಂಕಗಳು<br>500 ಹಾಸಿಗೆಗಳು-30 ಅಂಕಗಳು | | |
| 4 | ಟೆಂಡರ್‌ದಾರರು ಆಸ್ಪತ್ರೆ ತ್ಯಾಜ್ಯವನ್ನು ಸರಾಗವಾಗಿ ಸಾಗಿಸುವ ಸಲುವಾಗಿ 10 ಟನ್ ಸಾಗಿಸುವ ಸಾಮರ್ಥ್ಯವಿರುವ ಸ್ವಂತ ವಾಹನ (ಕಸ ಸಂಗ್ರಾಹಕ) ಹೊಂದಿರುವ ಕುರಿತು ಪೂರಕ ದಾಖಲೆ ಸಲ್ಲಿಸಬೇಕು ಹಾಗೂ ತ್ಯಾಜ್ಯ ವಿಲೇವಾರಿ ಘಟಕವನ್ನು ಹೊಂದಿರುವ ಏಜೆನ್ಸಿಗಳ ನಡುವಿನ ಎಂ ಓ ಯು/ಒಪ್ಪಂದವನ್ನು ಸಲ್ಲಿಸಬೇಕು. | 10 ಅಂಕಗಳು | ಮೇಲೆ ತಿಳಿಸಿದಂತೆ |
| 5 | ಐಎಸ್‌ಓ ಪ್ರಮಾಣಿಕೃತ ಕಂಪನಿ | 06 ಅಂಕಗಳು | ಮೇಲೆ ತಿಳಿಸಿದಂತೆ |

ಏಜೆನ್ಸಿಯ ಅಂತಿಮ ಆಯ್ಕೆಗೆ ತಾಂತ್ರಿಕ ಬಿಡ್‌ನಲ್ಲಿ ಗಳಿಸಿದ ಅಂಕಗಳು ಹಾಗೂ ಉಲ್ಲೇಖಿಸಿದ ಶುಲ್ಕಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಅಂದರೆ ಮೆರಿಟ್‌ಗೆ 75% ರಷ್ಟು ತಾಂತ್ರಿಕ ಮಾನದಂಡಗಳು, ಅನುಭವ ವಿವರ ಮತ್ತು ಆರ್ಥಿಕ ಸಾಮರ್ಥ್ಯಕ್ಕಾಗಿ ಗಳಿಸಿದ ಅಂಕಗಳು ಹಾಗೂ ಉಲ್ಲೇಖಿಸಿದ ಶುಲ್ಕಕ್ಕೆ 25% ಅಂಕಗಳನ್ನು ಪರಿಗಣಿಸಲಾಗುತ್ತದೆ.

**ಮಾನದಂಡಗಳು: ಭದ್ರತಾ ಸೇವೆ**

ಮೌಲ್ಯಮಾಪನ ಮಾನದಂಡ: ಬಿಡ್‌ದಾರರನ್ನು ತಾಂತ್ರಿಕ-ವಾಣಿಜ್ಯ (ಟೆಕ್ನೋ ಕಮರ್ಷಿಯಲ್) ಮೌಲ್ಯಮಾಪನದ ಆಧಾರದ ಮೇಲೆ ಆಯ್ಕೆ ಮಾಡಲಾಗುತ್ತದೆ. ತಾಂತ್ರಿಕ ಮಾನದಂಡಗಳಿಗೆ ಈ ಕೆಳಕಂಡಂತೆ 100 ಅಂಕಗಳನ್ನು ನಿಗಧಿಪಡಿಸಲಾಗಿದೆ.

| ಕ್ರ ಸಂ | ಮಾನದಂಡ | ಗರಿಷ್ಠ ಅಂಕಗಳು | ಷರಾ |
|---|---|---|---|
| 1 | ಕಾರ್ಯಾಚರಣೆಯಲ್ಲಿರುವ ವರ್ಷಗಳು | 24 (ಪೂರ್ಣಗೊಂಡ ಪ್ರತಿ ವರ್ಷಕ್ಕೆ 2 ಅಂಕಗಳು) | ದಾಖಲೆ ಆಧಾರದ ಮೇಲೆ ಅಂಕಗಳನ್ನು ನೀಡಲಾಗುತ್ತದೆ |
| 2 | ಕಂಟ್ರಾಕ್ಟರ್/ಏಜೆನ್ಸಿಗಳು ಭದ್ರತಾ ಸೇವೆ ಕ್ಷೇತ್ರದಲ್ಲಿ ಕನಿಷ್ಠ 5 ವರ್ಷಗಳ ಕಾಲ ಸೇವೆ ಸಲ್ಲಿಸಿರಬೇಕು ಇದರಲ್ಲಿ ಕನಿಷ್ಠ ಪಕ್ಷ ಕರ್ನಾಟಕದ ಯಾವುದಾದರು ಸರ್ಕಾರಿ ಆಸ್ಪತ್ರೆಯಲ್ಲಿ ಕನಿಷ್ಠ 3 | 30 ಅಂಕಗಳು | ಮೇಲೆ ತಿಳಿಸಿದಂತೆ |

| | | | |
|---|---|---|---|
| | ವರ್ಷಗಳ ಕಾಲ ಸೇವೆ ಸಲ್ಲಿಸಿರಬೇಕು<br>100 ಹಾಸಿಗೆಗಳು-02 ಅಂಕಗಳು<br>200 ಹಾಸಿಗೆಗಳು-04 ಅಂಕಗಳು<br>300 ಹಾಸಿಗೆಗಳು-06 ಅಂಕಗಳು<br>400 ಹಾಸಿಗೆಗಳು-08 ಅಂಕಗಳು<br>500 ಹಾಸಿಗೆಗಳು-10 ಅಂಕಗಳು<br>750 ಹಾಸಿಗೆಗಳು-20 ಅಂಕಗಳು<br>1000 ಹಾಸಿಗೆಗಳು-30 ಅಂಕಗಳು | | |
| 3 | ಕನಿಷ್ಠ 500 ಹಾಸಿಗೆ ಸಾಮರ್ಥ್ಯದ ಹೃದ್ರೋಗ ಆಸ್ಪತ್ರೆಯಲ್ಲಿ ಅನುಭವವಿರಬೇಕು.<br>100 ಹಾಸಿಗೆಗಳು-05 ಅಂಕಗಳು<br>200 ಹಾಸಿಗೆಗಳು-10 ಅಂಕಗಳು<br>300 ಹಾಸಿಗೆಗಳು-15 ಅಂಕಗಳು<br>400 ಹಾಸಿಗೆಗಳು-20 ಅಂಕಗಳು<br>500 ಹಾಸಿಗೆಗಳು-25 ಅಂಕಗಳು | 25 ಅಂಕಗಳು | ಮೇಲೆ ತಿಳಿಸಿದಂತೆ |
| 4 | ಆಸ್ಪತ್ರೆಯೇತರ ಅನುಭವಗಳು ಅಂದರೆ ಸರ್ಕಾರಿ ಸಂಸ್ಥೆಗಳು ಸಾಫ್ಟ್ ವೇರ್ ಕಂಪನಿಗಳು / ಪಂಚತಾರ ಹೋಟೆಲ್‌ಗಳು, ಇತ್ಯಾದಿ | 10 ಅಂಕಗಳು | ಮೇಲೆ ತಿಳಿಸಿದಂತೆ |
| 5 | ಐಎಸ್‌ಓ ಪ್ರಮಾಣಿಕೃತ ಕಂಪನಿ | 06 ಅಂಕಗಳು | ಮೇಲೆ ತಿಳಿಸಿದಂತೆ |
| 6 | ಸೆಕ್ಯೂರಿಟಿ ಗಾರ್ಡ್‌ಗಳು / ಸೂಪರ್ ವೈಸರ್‌ಗಳಿಗೆ ಅಗ್ನಿ ಶಾಮಕ ತರಬೇತಿ ನೀಡಿರುವ ಅಗ್ನಿಶಾಮಕ ತರಬೇತಿ ಪ್ರಮಾಣ ಪತ್ರ | 05 ಅಂಕಗಳು | ಮೇಲೆ ತಿಳಿಸಿದಂತೆ |

ಏಜೆನ್ಸಿಯ ಅಂತಿಮ ಆಯ್ಕೆಗೆ ತಾಂತ್ರಿಕ ಬಿಡ್‌ನಲ್ಲಿ ಗಳಿಸಿದ ಅಂಕಗಳು ಹಾಗೂ ಉಲ್ಲೇಖಿಸಿದ ಶುಲ್ಕಗಳನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಅಂದರೆ ಮೆರಿಟ್‌ಗೆ 75% ರಷ್ಟು ತಾಂತ್ರಿಕ ಮಾನದಂಡಗಳು, ಅನುಭವ ವಿವರ ಮತ್ತು ಆರ್ಥಿಕ ಸಾಮರ್ಥ್ಯಕ್ಕಾಗಿ ಗಳಿಸಿದ ಅಂಕಗಳು ಹಾಗೂ ಉಲ್ಲೇಖಿಸಿದ ಶುಲ್ಕಕ್ಕೆ 25% ಅಂಕಗಳನ್ನು ಪರಿಗಣಿಸಲಾಗುತ್ತದೆ.

ಸಂಖ್ಯೆ:ಎಂಇಡಿ 437 ಎಂಎಸ್‌ಎಫ್ 2025

**(ಡಾ. ಶರಣಪ್ರಕಾಶ ಆರ್. ಪಾಟೀಲ)**
ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು